# ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 27-12-2022

## ಬಗದಲ್ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 92/2022 ಕಲಂ 379 ಐಪಿಸಿ :-

ದಿನಾಂಕ 26.12.2022 ರಂದು 2000 ಗಂಟೆಗೆ ಫಿರ್ಯಾಧಿ ನಾಗೇಶ್ವರ ತಂದೆ ಶಾಮರಾವ ಮೀಲ್ಟರಿ, ವಯ: 47 ವರ್ಷ, ಜಾತಿ: ರೆಡ್ಡಿ, ಉ: ನಿವೃತ್ತ ಸೈನಿಕ, ಸಾ|| ಚಂದಾಪೂರ ಸದ್ಯ ಹಳೆಯ ಆದರ್ಶ ಕಾಲೋನಿ ಬೀದರ ರವರು ನೀಡಿದ ದೂರಿನ ಸಾರಾಂಶವೆನೆಂದರೆ ನಾನು ಫಿರ್ಯಾದಿಯು ತನ್ನ ಸಂಬಂಧಿಕರ ಬಜಾಜ ಕಂಪನಿಯ ಪ್ಲಾಟಿನ ಮೋಟಾರ ಸೈಕಲ ನಂ ಕೆಎ32ಹೆಚ್ಎ1112 ನೇದ್ದನ್ನು ತೆಗೆದುಕೊಂಡು ದಿನಾಂಕ 12.12.2022 ರಂದು ನಾನು ಚಂದಾಪೂರದಿಂದ ಬೀದರಗೆ ಮೋಟಾರ ಸೈಕಲ ನಂ ಕೆಎ32ಹೆಚ್ಎ1112 ನೇದರ ಮೇಲೆ ಬರುವಾಗ ಸಮಯ ಅಂದಾಜು ಸಾಯಂಕಾಲ 4 ಗಂಟೆಯ ಸುಮಾರಿಗೆ ನನಗೆ ಹಸಿವು ಆಗಿದ್ದರಿಂದ ಬೀದರ ಚಿಂಚೋಳಿ ರಸ್ತೆಯ ಕಾಡವಾದ ಹತ್ತಿರ ಇರುವ ಜೈಭವಾನಿ ಧಾಬಾ ಹತ್ತಿರ ಮೋಟಾರ ಸೈಕಲ ನಿಲ್ಲಿಸಿ ಊಟ ಮಾಡಿ ಹೊರಗೆ ಬರುವಷ್ಟರಲ್ಲಿಯೇ ಮೋಟಾರ ಸೈಕಲ ನಂ ಕೆಎ32ಹೆಚ್ಎ1112 ನೇದ್ದು ಯಾರೋ ಕಳ್ಳರು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ. ಮೋಟಾರ ಸೈಕಲ ನಂ ಕೆಎ32ಹೆಚ್ಎ1112 ನೇದರ ಅಂದಾಜು ಕಿಮ್ಮತ್ತು 60,000/- ರೂಪಾಯಿ ಇರುತ್ತದೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

## ಹುಮನಾಬಾದ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 136/2022 ಕಲಂ 279, 304(ಎ) ಐಪಿಸಿ :-

ದಿನಾಂಕ: 26/12/2022 ರಂದು ಬೆಳಿಗ್ಗೆ 12-15 ಗಂಟೆಗೆ ಫೀರ್ಯಾಧಿ ಶ್ರೀ ಚಾರ್ಲೆಶ ತಂದೆ ದಶರಥ ಗಂದೆನವರ ಸಾ: ನಂದಗಾವ ಇವರು ಠಾಣೆಗೆ ಹಾಜರಾಗಿ ಮೌಖಿಕ ದೂರು ನಿಡಿದರ ಸಾರಾಂಶವೆನೆಂದರೆ ದಿನಾಂಕ: 26/12/2022 ರಂದು ಫಿರ್ಯಾದಿಯ ತಂದೆ ನಂದಗಾವದಿಂದ ಆಟೋ ನಂ KA39/4810 ನೆದರಲ್ಲಿ ಕೂಳಿತುಕೊಂಡು ಹುಮನಾಬಾದಗೆ ಬರುವಾಗ ಆಟೋ ಚಾಲಕ ಕಲ್ಯಾಣಿ ತಂದೆ ವಿಠಲ ವಿತ್ರ ವಯ: 31ವರ್ಷ, ಸಾ: ಮಲಕಾಪೂರವಾಡಿ ಇವನು ಆಟೋವನ್ನು ಅತೀವೇಗ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಚಲಾಯಿಸಿಕೊಂಡು ಬೆಳಿಗ್ಗೆ 09-30 ಗಂಟೆಗೆ ಹುಡಗಿ ಗ್ರಾಮದ ವೆಂಕಮ್ಮ ದೇವಸ್ಥಾನದ ಹತ್ತಿರ ಒಮ್ಮಲೆ ಆಟೋ ಕಟ್ ಹೊಡೆದಾಗ ಫಿರ್ಯಾದಿಯು ತಂದೆ ದಶರಥ ತಂದೆ ಮಾಣಿಕಪ್ಪ ಗಂದೆನೊರ ವಯ: 50ವರ್ಷ, ಇವರು ಆಟೋದ ಶೀಟಿನ ಎಡಗಡೆಯಿಂದ ಆಯಾ ತಪ್ಪಿ ರೋಡಿನ ಮೇಲೆ ಬಿದ್ದಿರುತ್ತಾರೆ. ಇದರಿಂದ ತಲೆಗೆ ಭಾರಿ ರಕ್ತಗಾಯವಾಗಿ ಖಾಸಗಿ ವಾಹನದಲ್ಲಿ ಹಾಕಿಕೊಂಡು ಹುಮನಾಬಾದ ಸರಕಾರಿ ಆಸ್ಪತ್ರೆಗೆ ತಂದು ದಾಖಲು ಮಾಡಿದ ನಂತರ ಹೆಚ್ಚಿನ ಚಿಕತ್ಸೆ ಕುರಿತು ಕಲಬುರಗಿಗೆ ಕರೆದುಕೊಂಡು ಹೋಗುವಾಗ ದಿನಾಂಕ: 26/12/2022 ರಂದು ಬೆಳಿಗ್ಗೆ 11-00 ಗಂಟೆ ಸುಮಾರಿಗೆ ಮಹಾಗಾಂವ ಕ್ರಾಸ ಹತ್ತಿರ ಮೃತ ಪಟ್ಟಿರುತ್ತಾರೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

## ಬಸವಕಲ್ಯಾಣ ನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 174/2022 ಕಲಂ 78(3) ಕೆಪಿ ಕಾಯ್ದೆ :-

ದಿನಾಂಕ:26/12/2022 ರಂದು 10:15 ಗಂಟೆಗೆ ಪಿಎಸ್ಐ ರವರು ಠಾಣೆಯಲ್ಲಿರುವಾಗ ಭಾತ್ಮಿದಾರರಿಂದ ಫೋನ್ ಮುಖಾಂತರ ಖಚಿತ ಬಾತ್ಮಿ ತಿಳಿದುಬಂದಿದ್ದೆನೆಂದರೆ ಬಸವಕಲ್ಯಾಣ ನಗರದ ಬಸವ ಗಂಜದಲ್ಲಿ ಗುಣತುರೆ ಅಡತ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿ ಸಾರ್ವಜನಿಕರಿಗೆ ಕಾನೂನು ಬಾಹಿರವಾಗಿ ಒಂದು ರೂಪಾಯಿಗೆ 90/-ರೂಪಾಯಿ ಎಂದು ಕೂಗಿ ಹೇಳಿ ಸಾರ್ವಜನಿಕರಿಂದ ಹಣಪಡೆದು ನಸಿಬಿನ ಮಟಕಾ ಚೀಟಿ ಬರೆದುಕೊಳ್ಳುತ್ತಿದ್ದಾರೆ ಬಾತ್ಮೀ ಮೇರೆಗೆ ಹೋಗಿ ನೋಡಿದಾಗ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿ ಸಾರ್ವಜನಿಕರಿಗೆ 1 ರೂಪಾಯಿಗೆ 90/-ರೂಪಾಯಿ ಎಂದು ಕೂಗಿ ಹೇಳಿ ಸಾರ್ವಜನಿಕರಿಂದ ಹಣ ಪಡೆದು ಮಟಕಾ ಚೀಟಿ ಬರೆದು ಕೊಳ್ಳುವುದನ್ನು ನೋಡಿ ದಾಳಿ ಮಾಡಿ ಹಿಡಿದು ವಿಚಾರಿಸಲು ಆತನು ತನ್ನ ಹೆಸರು ಮಾರುತಿ ತಂದೆ ನರಸಿಂಗ ಕೋರೆ ವಯ: 30 ವರ್ಷ ಜಾತಿ: ಎಸ್ಸಿ(ಮಾದಿಗ) ಉ: ಹಮಾಲಿ ಕೆಲಸ ಸಾ: ಧರ್ಮಪ್ರಕಾಶಗಲ್ಲಿ ಬಸವಕಲ್ಯಾಣ ಎಂದು ತಿಳಿಸಿದಾಗ ಅವನ ಅಂಗ ಶೋಧನೆ ಮಾಡಲು ಅವನ ಹತ್ತಿರ ನಗದು ಹಣ:4500/-ರೂ, ಮತ್ತು ಒಂದು ಮಟಕಾ ಚೀಟಿ ಹಾಗು ಒಂದು ಬಾಲ್ ಪೆನ್ ಸಿಕ್ಕಿರುತ್ತದೆ. ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡ ತನಿಖೆ ಕೈಗೊಳ್ಳಲಾಗಿದೆ.